# ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

## ನಂಜನಗೂಡು

**ಸಿ.ಸಿ. ನಂ.733-2019** **ಡಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು | ರವಿಶಂಕರ್ |
| ತಂದೆ/ ಗಂಡನ ಹೆಸರು | ಲೇ. ಪುಟ್ಟಪ್ಪ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯವಸಾಯ ಮತ್ತು ವ್ಯಾಪಾರ |
| ವಾಸ್ತವ್ಯ | ದೇಬೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 26-08-2023. |

**ಮುಖ್ಯ ವಿಚಾರಣೆಃ ಆರೋಪ ಪರ ಶ್ರೀ ಕೆ.ಟಿ.ಆರ್ ವಕೀಲರಿಂದಃ**

ನನಗೆ ಪಿರ್ಯಾದಿದಾರರು ಗೊತ್ತು. ಪಿರ್ಯಾದಿದಾರರು ನನಗೆ ದೂರದ ಸಂಬಂಧಿ ಆಗಬೇಕು. ನಾನು ರೆಪ್ಕೋ ಹೊಂ ಫೈನಾನ್ಸ್ ನಲ್ಲಿ ಸಾಲ ಪಡೆಯುವ ಸಮಯ ಅವರು ನನಗೆ ಜಾಮೀನುದಾರರಾಗಿದ್ದರು. ನಾನು ಮತ್ತು ಪಿರ್ಯಾದಿದಾರರು ಸೇರಿ ಸುಮಾರು 14 ವರ್ಷಗಳ ಹಿಂದೆ ರಸಗೊಬ್ಬರದ ವ್ಯಾಪಾರವನ್ನು ಮಾಡುತ್ತಿದ್ದೆವು. ನಾನು ರೆಪ್ಕೋ ಹೊಂ ಫೈನಾನ್ಸ್ ನಲ್ಲಿ 2009 ನೇ ಸಾಲಿನಲ್ಲಿ ಸಾಲ ಪಡೆದಿದ್ದೆನು. ಮೊದಲಿಗೆ ಪಿರ್ಯಾದಿದಾರರು ನನಗೆ ಜಾಮೀನು ಕೊಡಲು ಒಪ್ಪಿದ್ದು  ರೆಪ್ಕೋ ಹೊಂ ಫೈನಾನ್ಸ್ ವತಿಯಿಂದ ಸಾಲ ಮಂಜೂರಾದ ನಂತರ ಪಿರ್ಯಾದಿದಾರರು ಜಾಮೀನು ನೀಡಲು ತನಗೆ ಭಯವಾಗುತ್ತಿರುವುದರಿಂದ ಭದ್ರತೆಗಾಗಿ 12 ಚೆಕ್ ಅನ್ನು ನೀಡುವಂತೆ ಕೇಳಿದ್ದು, ಆ ಸಮಯ ಬೇರೆ ಜಾಮೀನುದಾರರನ್ನು ಕರೆತರಲು ಸಮಯಾವಕಾಶ ಇಲ್ಲದೇ ಇದ್ದುದ್ದರಿಂದ ಹಾಗೂ ಮಂಜೂರಾಗಿದ್ದ ಸಾಲವು ವಾಪಸ್ಸು ಹೋಗುತ್ತದೆ ಎಂಬ ಭಯದಿಂದ ನಾನು ಪಿರ್ಯಾದಿದಾರರಿಗೆ 12 ಚೆಕ್‌ಗಳನ್ನು ನೀಡಿರುತ್ತೇನೆ. ನಾನು ಮೊದಲಿಗೆ ಪಿರ್ಯಾದಿದಾರರು ಇಂಡಿಯನ್ ಬ್ಯಾಂಕಿನ ಖಾಲಿ ಸಹಿ ಮಾಡಿದ ಚೆಕ್ಕುಗಳನ್ನು ನೀಡಿದ್ದು ಸಿ.ಟಿ.ಎಸ್ ಚೆಕ್ಕುಗಳು ಬಂದ ನಂತರ ಐ.ಸಿ.ಐ.ಸಿ.ಐ ಬ್ಯಾಂಕಿನ ಚೆಕ್ ಗಳನ್ನು ಪಿರ್ಯಾದಿದಾರರಿಗೆ ನೀಡಿರುತ್ತೇನೆ. ನಂತರ ನಾನು ಇಂಡಿಯನ್ ಬ್ಯಾಂಕಿನ ಚೆಕ್‌ಗಳನ್ನು ವಾಪಸ್ಸು

ಮಾಡುವಂತೆ ಕೇಳಿದಾಗ ಪಿರ್ಯಾದಿದಾರರು ನನಗೆ ನಮ್ಮ ನಂಬಿಕೆ ಇರುವುದಿಲ್ಲೇ ಎಂದು ಪ್ರಶ್ನಿಸಿ ಬ್ಯಾಂಕಿನ ಸಾಲ ತೀರುವಳಿ ಆದ ನಂತರ ಚೆಕ್ಕುಗಳನ್ನು ಹಿಂದಿರುಗಿಸುವುದಾಗಿ ತಿಳಿಸಿದ್ದರು.

2.ನನಗೆ ಲಿವರ್ ತೊಂದರೆಯಿಂದಾಗಿ ಸಾಲ ಮರುಪಾವತಿ ಮಾಡಲಾಗದೇ ನಾನು ಸುಸ್ಥಿದಾರನಾಗಿದ್ದರಿಂದ ಬ್ಯಾಂಕಿನವರು ಪಿರ್ಯಾದಿದಾರರಿಗೆ ನೋಟಿಸ್ ಅನ್ನು ಜಾರಿ ಮಾಡಿದ್ದು ಸದರಿ ನೋಟಿಸ್ ಜಾರಿ ಆದ ನಂತರ ನಾನು ಮನೆ ನಿರ್ಮಾಣ ಮಾಡಲು ಪಡೆದಿದ್ದ ಸಾಲದ ಹೊರೆ ಪಿರ್ಯಾದಿದಾರರ ಮೇಲೆ ಬರುತ್ತೆದೆ ಎಂಬ ಭಯಂದಿದ ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ಐ.ಸಿ.ಐ.ಸಿ.ಐ ಬ್ಯಾಂಕಿನ ಸಹಿ ಮಾಡಿದ ಚೆಕ್ಕುಗಳನ್ನು ಪಿರ್ಯಾದಿದಾರರಿಗೆ ನೀಡಿರುತ್ತೇನೆ. ಪಿರ್ಯಾದಿದಾರರು ಹೇಳುವಂತೆ ದಿ.05-11-2018 ರಂದು ನಾನು ಅವರಿಂದ ಸಾಲವಾಗಿ ಹಣ ಪಡೆದಿರುವುದಿಲ್ಲ, ಬಹಳ ಹಿಂದೆಯೇ ನಾನು ಅವರಿಗೆ ಚೆಕ್ ಅನ್ನು ನೀಡಿರುತ್ತೇನೆ. ನಾನು ದಿ.26-12-2018 ರಂದು ಪಿರ್ಯಾದಿದಾರರಿಗೆ ಐ.ಸಿ.ಐ.ಸಿ.ಐ ಬ್ಯಾಂಕಿನ ನನ್ನ ಚೆಕ್ ಅನ್ನು ನೀಡಿರುವುದಿಲ್ಲ. ನಾನು ಪಿರ್ಯಾದಿದಾರಾರಿಂದ ಎಂದೂ, ಯಾವಾಗಲು ಸಾಲವಾಗಿ ಹಣ ಪಡೆದಿರುವುದಿಲ್ಲ. ಪಿರ್ಯಾದಿದಾರರಿಗೆ ರೂ.25,00,000/- ಗಳನ್ನು ಸಾಲವಾಗಿ ಹಣ ನೀಡುವಷ್ಟು ಆರ್ಥಿಕ ಚೈತನ್ಯ ಇರುವುದಿಲ್ಲ. ಆದುದರಿಂದ ಪಿರ್ಯಾದಿದಾರರು ಸಲ್ಲಿಸಿರುವ ಪ್ರಕರಣವನ್ನು ವಜಾಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

(ಪಾಟೀ ಸವಾಲಿಗೆ ಪಿರ್ಯಾದಿದಾರರ ಪರ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**